Indian Journal of History and Archaeology

ISSN (E):2582-225X
VOL-1 ISSUE- 6, MARCH-APRIL, 2020, 42-51

# ಮಂಡ್ಯ ಜಿಲ್ಲೆಯಲ್ಲಿ ದಲಿತ ಸಂಘರ್ಷ ಸಮಿತಿ ಶಾಖೆಯ ಚಾಲನಾಪೂರ್ವದಲ್ಲಿ ದಲಿತಪರ ಧ್ವನಿಗಳು

ಡಾ. ಕೆ. ಗುರುಸ್ವಾಮಿ

**ಡಾ. ಕೆ. ಗುರುಸ್ವಾಮಿ**
ಸಮಾಜ–ವಿಜ್ಞಾನ ಶಿಕ್ಷಕರು
ಅಲ್ಪಸಂಖ್ಯಾತರ ಮೊರಾರ್ಜಿ
ದೇಸಾಯಿ ವಸತಿ ಶಾಲೆ
ಹೊಳೆನರಸೀಪುರ, ಹಾಸನ.

ಸ್ವಾತಂತ್ರ್ಯಪೂರ್ವದಿಂದಲೂ ದೇಶ ಇತರೆ ರಾಜ್ಯಗಳಂತೆ ಕರ್ನಾಟಕದಲ್ಲೂ ಮತೀಯ ಊಳಿಗಮಾನ್ಯ ವಾರಸುದಾರರಿಂದ ಕೂಲಿಕಾರ್ಮಿಕ ತಳಸಮುದಾಯಗಳ ಮೇಲೆ ಘೋರವಾದ ದೌರ್ಜನ್ಯಗಳು ಎಲ್ಲಾ ರಂಗದಲ್ಲೂ ನಡೆಯುತ್ತಲೇ ಬಂದಿವೆ. ಇದರಲ್ಲಿ ರಾಜ್ಯದ ಜಿಲ್ಲೆಗಳಲ್ಲಿ ಒಂದಾದ ಮಂಡ್ಯ ಜಿಲ್ಲೆ ಕೂಡ ಶೋಷಕರ ಈ ರೀತಿಯ ಶೋಷಣೆಯಿಂದ ಹೊರತಾಗಿಲ್ಲ. ಇಲ್ಲೂ ಕೂಡ ದಲಿತರ ಮೇಲೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ವಿವಿಧ ಬಗೆಯಲ್ಲಿ ಅಮಾನವೀಯ ಆಚರಣೆಗಳು ನಡೆದುಹೋಗಿವೆ. ಇಲ್ಲಿ ಇವುಗಳನ್ನು ತಡೆಗಟ್ಟಲು ಹಲವು ರೀತಿಯ ಆಂದೋಲನಗಳು ನಡೆದಿವೆ. ಹೀಗಾಗಿ ಈ ಲೇಖನದಲ್ಲಿ ಮಂಡ್ಯ ಜಿಲ್ಲೆಯ ಉಗಮ, ಸ್ವಾತಂತ್ರ್ಯ ಪೂರ್ವ ಮತ್ತು ನಂತರದಲ್ಲೂ ಇಲ್ಲಿನ ದಲಿತರ ಮೇಲಾದ ಜಾತೀಯತೆಯ ಕ್ರೌರ್ಯಗಳು, ಇವುಗಳನ್ನು ತಡೆಗಟ್ಟಿ ದಲಿತರಿಗೆ ಉತ್ತಮ ರೀತಿಯ ಜೀವನವನ್ನು ರೂಪಿಸಿಕೊಡಲು ದಲಿತ ಪ್ರಜ್ಞಾವಂತರು ಮಾಡಿದ ಆರಂಭಿಕ ಪ್ರಯತ್ನಗಳು ಹಾಗೂ 1970ರ ದಶಕದಲ್ಲಿ ಇನ್ನಿತರ ಜಿಲ್ಲೆಗಳಂತೆ ಮಂಡ್ಯಜಿಲ್ಲೆಯಲ್ಲೂ ದಲಿತ ಸಂಘಟನೆಯೊಂದು ಅಸ್ಮಿತೆಗೊಂಡದ್ದನ್ನು ಸವಿವರವಾಗಿ ಪ್ರಸ್ತುತ ಪಡಿಸಲು ಉದ್ದೇಶಿಸಲಾಗಿದೆ.

ಸಾವಿರಾರು ವರ್ಷಗಳ ಹಿಂದಿನಿಂದಲೂ 'ಮಂಟೆಯ', 'ಮಂಡೆವೇಮು', 'ವೇದಾರಣ್ಯ','ಅಗ್ರಹಾರಮಂಡೇಯ', 'ಚಿಕ್ಕಮಂಟೇಯ', 'ಅನಾದಿಅಗ್ರಹಾರ ಮಂಡೇಯ', 'ಮಾಂಡವ್ಯ' ಮುಂತಾದ ಹೆಸರುಗಳಿಂದ ಇತಿಹಾಸದಲ್ಲಿ 'ಮಂಡ್ಯ

ಜಿಲ್ಲೆ' ಚಿರಪರಿಚಿತವಾಗಿದೆ[1]. ಈ ಪ್ರದೇಶದಲ್ಲಿ ಪ್ರಾಚೀನಕಾಲದ ಶಿಲಾಯುಗಸಂಸ್ಕೃತಿಯ ಚಹರೆಗಳು ಸಿಕ್ಕಿವೆ. ಜೊತೆಗೆ ದಕ್ಷಿಣ ಭಾರತವನ್ನು ಆಳಿದ ಅನೇಕ ರಾಜಮನೆತನಗಳಾದ ಕದಂಬರು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ಚೋಳರು, ವಿಜಯನಗರ ಸಾಮ್ರಾಜ್ಯದ ಅರಸರು, ಹದಿನಾಡುಪಾಳೆಯಗಾರರು, ಉಮ್ಮತ್ತೂರಿನ ಪಾಳೆಯಗಾರರು, ಮೈಸೂರು ಒಡೆಯರು, ಹೈದರ್–ಅಲಿ ಮತ್ತು ಟಿಪ್ಪು ಸುಲ್ತಾನರು ಹಾಗೂ ಇಡೀ

ಭಾರತವನ್ನು ತಮ್ಮ ಸಾರ್ವಭೌಮತ್ವದಡಿಯಲ್ಲಿ ಸುಮಾರು ಎರಡೂವರೆ ಶತಮಾನಗಳ ಕಾಲ ಹಿಡಿದಿಟ್ಟುಕೊಂಡಿದ್ದ ಬ್ರಿಟಿಷರುಗಳು ಇಲ್ಲಿ ಪ್ರಭುತ್ವವನ್ನು ಸ್ಥಾಪಿಸಿದ್ದುದನ್ನುಕಾಣಬಹುದಾಗಿದೆ[2]. ಇಷ್ಟೆಲ್ಲಾ ಐತಿಹಾಸಿಕ ಹಿರಿಮೆಯನ್ನು ಗಳಿಸಿರುವ ಮಂಡ್ಯ ನಗರ ಆಂಗ್ಲರ ಕಪಿಮುಷ್ಠಿಗೆ ಸಿಲುಕಿ ಭಾರತ ಸ್ವಾತಂತ್ರ್ಯಕ್ಕಾಗಿ ಒದ್ದಾಡುತ್ತಿದ್ದ ವೇಳೆಯಲ್ಲಿ ಜಿಲ್ಲೆಯಾಗಿ ಚಾಲನೆಗೆ ಬಂತು.

**ಮಂಡ್ಯ ಜಿಲ್ಲೆಯ ಉಗಮ:**

ಮಂಡ್ಯ ಪ್ರಾಂತ್ಯ 1862ರಲ್ಲಿ ಮೈಸೂರು ಸಂಸ್ಥಾನದ ಕಮಿಷನರ್ ಆಗಿದ್ದ ಲಾರ್ಡ್ ಬೆಂಥ್ಯಾಮ್ ಬೌರಿಂಗ್‌ನ ಆಡಳಿತಾವಧಿಯಲ್ಲಿ 'ಮೈಸೂರು ಜಿಲ್ಲೆ' ಉಗಮವಾದ ಸಂದರ್ಭದಲ್ಲಿ ಇದರ 14 ತಾಲ್ಲೂಕುಗಳಲ್ಲಿ ಒಂದಾಗಿತ್ತು. ಆ ತಾಲ್ಲೂಕುಗಳನ್ನು ಮೈಸೂರು,ಚಾಮರಾಜನಗರ, ಪಟ್ಟಣ ಅಷ್ಟಗ್ರಾಮ, ಪಿರಿಯಾಣಪಟ್ಟಣ, ಯಡತೊರೆ, ಹೆಗ್ಗಡದೇವನಕೋಟೆ (ಹೆಚ್.ಡಿ.ಕೋಟೆ ಅಥವಾ ಪುನ್ನಾಟ), ಗುಂಡ್ಲುಪೇಟೆ, ನಂಜನಗೂಡು, ಮೈಸೂರು ಅಷ್ಟಗ್ರಾಮ, ತಲಕಾಡು, ಮಂಡ್ಯ, ಮದ್ದೂರು, ಮಳವಳ್ಳಿ, ಯಳಂದೂರು ಎಂದು ವಿಂಗಡಿಸಲಾಗಿತ್ತು.[3]ಅನಂತರ 1928ರ ವೇಳೆಗೆ ಮಂಡ್ಯ ಮೈಸೂರು ಜಿಲ್ಲೆಯ ನಾಲ್ಕು ಉಪವಿಭಾಗಗಳಾದ ಮೈಸೂರು, ನಂಜನಗೂಡು, ಫ್ರೆಂಚ್‌ರಾಕ್ಸ್ (ಪಾಂಡವಪುರ) ಗಳಲ್ಲಿ ಒಂದಾಗಿ ರಚನೆಯಾಯಿತು. ಜೊತೆಗೆ ಇದು ತನ್ನ ಅಡಿಯಲ್ಲಿ ಮಂಡ್ಯ, ಮಳ್ಳವಳ್ಳಿ ಮದ್ದೂರು ಎಂಬ ಮೂರು ತಾಲ್ಲೂಕುಗಳನ್ನು ಒಳಗೊಂಡಿತ್ತು[4]. ಈ ಸಂದರ್ಭದಲ್ಲಿ ಮಂಡ್ಯ ಉಪವಿಭಾಗವನ್ನು ಪ್ರತ್ಯೇಕ ಜಿಲ್ಲೆಯನ್ನಾಗಿ ಮಾಡಬೇಕೆಂದು ಈ ಪ್ರಾಂತ್ಯದ ಕೆಲವು ಸ್ವಾತಂತ್ರ್ಯ ಹೋರಾಟಗಾರರು ಮತ್ತು ಚಳವಳಗಾರರು ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗಳಲ್ಲಿ ಒತ್ತಾಯಿಸಿದ್ದರು. ಇದರಿಂದಾಗಿ ಮೈಸೂರು ಜಿಲ್ಲೆಯಲ್ಲಿದ್ದ ಮಂಡ್ಯ ಉಪವಿಭಾಗವನ್ನು ಜುಲೈ 01,1939ರಂದು ಮಂಡ್ಯ ಜಿಲ್ಲೆಯಾಗಿ ಅಂದಿನ ಸರ್ಕಾರ ಘೋಷಿಸಿತು. ತರುವಾಯ ಮೈಸೂರು ಜಿಲ್ಲೆಯ ಮತ್ತೊಂದು ಉಪವಿಭಾಗವಾಗಿದ್ದ ಫ್ರೆಂಚ್‌ರಾಕ್ಸ್ (ಪಾಂಡವಪುರ)ನ ತಾಲ್ಲೂಕುಗಳಾದ ಶ್ರೀರಂಗಪಟ್ಟಣ, ಫ್ರೆಂಚ್‌ರಾಕ್ಸ್, ನಾಗಮಂಗಲ, ಕೃಷ್ಣರಾಜಪೇಟೆ(ಅತ್ತಿಗುಪ್ಪೆ) ಗಳನ್ನು ಮಂಡ್ಯ ಜಿಲ್ಲೆಗೆ ಸೇರಿಸಲಾಯಿತು[5]. ಇದರಿಂದಾಗಿ

ಮಂಡ್ಯ ಜಿಲ್ಲೆಗೆ ಒಟ್ಟು ಏಳು ತಾಲ್ಲೂಕುಗಳು ಸೇರ್ಪಡೆಯಾದಂತಾಗಿ ತನ್ನ ವಿಸ್ತೀರ್ಣದ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡಿತ್ತು. ಅಲ್ಲದೆ ಐತಿಹಾಸಿಕ ಕಲೆ ಮತ್ತು ವಾಸ್ತುಶಿಲ್ಪ, ದೇವಾಲಯಗಳು, ವೀರಗಲ್ಲು, ಮಾಸ್ತಿಗಲ್ಲು, ಶಾಸನಗಳು, ನಾಣ್ಯಗಳು ಮತ್ತು ನೈಸರ್ಗಿಕ ಸಂಪನ್ಮೂಲಗಳ ಶ್ರೀಮಂತಿಕೆಗೆ ಹೆಸರುವಾಸಿಯಾಯಿತು.

ಇಷ್ಟಿದ್ದರೂ ಮಂಡ್ಯ ಜಿಲ್ಲೆ ಸಾಮಾಜಿಕ, ಆರ್ಥಿಕ, ಅಸಮಾನತೆಯ ಜನಜೀವನ ವ್ಯವಸ್ಥೆಗೆ ಸಂಬಂಧಿಸಿದಂತೆ ಕಪ್ಪುಚುಕ್ಕಿಯನ್ನು ಹೊಂದಿದೆ. ಇದಕ್ಕೆ ಮುಖ್ಯ ಕಾರಣ ಚಾತುರ್ವರ್ಣ್ಯವ್ಯವಸ್ಥೆಯಿಂದ ಉಂಟಾದ 'ಜಾತಿವ್ಯವಸ್ಥೆ'ಯೇ ಆಗಿದೆ. ಇದರಿಂದಾಗಿ ಇಲ್ಲೂ ಕೂಡ ಸ್ವಾತಂತ್ರ್ಯಪೂರ್ವ ಮತ್ತು ನಂತರದಲ್ಲೂ ಪರಿಶಿಷ್ಟ ಜಾತಿ, ವರ್ಗ, ಶ್ರಮಜೀವಿಗಳು, ಕೂಲಿಕಾರ್ಮಿಕರು, ಬಡವರು, ಭೂಹೀನರು, ಮಹಿಳೆಯರು ಮತ್ತು ಇನ್ನಿತರ ಶೋಷಿತ ದಲಿತ ಸಮುದಾಯಗಳ ಮೇಲೆ ಹಣವಂತರು, ಭೂ ಮಾಲೀಕರು, ಜಮೀನ್ದಾರರು, ಜಾತೀವಾದಿಗಳಿಂದ ಮೌಢ್ಯ ಸಂಪ್ರದಾಯಬದ್ಧ ಅಮಾನುಷ ಆಚರಣೆಗಳಿಗೆತುತ್ತಾಗಿ ಜಾತೀಯತೆಯ ಕ್ರೌರ್ಯಕ್ಕೆ ಬಲಿಯಾದರು.

- **ಜಿಲ್ಲೆಯಲ್ಲಿ ದಲಿತರ ಮೇಲಾದ ಜಾತೀಯತೆಯ ಕ್ರೌರ್ಯಗಳು:**

ಮಂಡ್ಯ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಪೂರ್ವದಿಂದಲೂ ಹರಿಜನರನ್ನೊಳಗೊಂಡ ದಲಿತರ ಮೇಲೆ ಒಂದಲ್ಲ ಒಂದು ರೀತಿಯಲ್ಲಿ ಕ್ಷುಲ್ಲಕ ಕಾರಣಗಳಿಗೆ ಜಾತೀವಾದಿಗಳಿಂದ ತೀವ್ರತರವಾದ ರೂಪದಲ್ಲಿ ಶೋಷಣೆಗಳು ನಡೆಯುತ್ತಲೇ ಬಂದಿವೆ. ಇಲ್ಲಿ ದಲಿತರುಗಳು ದೇವಸ್ಥಾನ, ಹೋಟೆಲ್, ಮಠ, ಮಂದಿರ, ಕ್ಷೌರದ ಅಂಗಡಿ, ಕೆರೆ, ಬಾವಿ, ಕಾಲುವೆ ಪ್ರವೇಶ ನಿಷೇಧ, ಜೀತಗಾರಿಕೆ, ಮೇಲ್ವರ್ಗದವರ ಬೀದಿಗಳಲ್ಲಿ ಚಪ್ಪಲಿ ಧರಿಸಿ ನಡೆಯುವುದು, ಸೈಕಲ್‌ನಲ್ಲಿ ಹೋಗುವುದು, ಛತ್ರಿ ಹಿಡಿದು ನಡೆಯುವುದು, ಉತ್ತಮ ಉಡುಪು, ಆಭರಣಗಳನ್ನು ಧರಿಸುವುದು, ಪಂಚೆಯನ್ನು ಮಂಡಿ ಮೇಲೆ ಎತ್ತಿ ಕಟ್ಟುವುದು ಅಕ್ಷಮ್ಯ ಅಪರಾಧವಾಗಿತ್ತು. ಒಂದು ವೇಳೆ ಇವುಗಳನ್ನುಮಾಡಿದರೆ ಅವರಿಗೆ ಸಾಮಾಜಿಕ ಬಹಿಷ್ಕಾರ, ಅಂಗಗಳ ಊನ ಮಾಡುವಂತಹ ಉಗ್ರ ಶಿಕ್ಷೆಯೇ ಕಾದಿರುತ್ತಿತ್ತು.ಅಲ್ಲದೆ ದಲಿತರನ್ನು ಶೈಕ್ಷಣಿಕ ಸವಲತ್ತುಗಳಿಂದ ದೂರವಿರಿಸಿ ತಾವೇ ಎಲ್ಲಾ ರೀತಿಯ ಉನ್ನತ ಹುದ್ದೆಗಳನ್ನು ಪಡೆದುಕೊಂಡು ಇವರನ್ನುನಿಸ್ತೇಜಗೊಳಿಸುತ್ತಿದ್ದರು. ಮಾತ್ರವಲ್ಲದೆ ದಲಿತರನ್ನು ತಮ್ಮ ಸೇವಕರನ್ನಾಗಿಸಿಕೊಂಡು ಯಾರಾದರೂ ಸತ್ತಾಗ, ಹುಟ್ಟಿದಾಗ, ಮದುವೆ, ಹಬ್ಬ, ಹರಿದಿನಗಳ ದಿನದಂದು ಕಡ್ಡಾಯವಾಗಿ ತಮಟೆ ಬಡಿಯಲೇಬೇಕೆಂಬ ಕಟ್ಟಪ್ಪಣೆ ವಿಧಿಸಿದ್ದರು.[5]ಜೊತೆಗೆಇವರ ಕೇರಿಗಳಿಗೆ ಊರಿನ ದೇವರ ಮೆರವಣಿಗೆ, ಉತ್ಸವಗಳಾಗಲಿ ಹೋಗದಂತೆ ನಿಯಮಗಳನ್ನು ರೂಪಿಸಿದ್ದರು.

ಇವರು ದಲಿತರ ಹೊಲಗದ್ದೆಗಳನ್ನು ಅಕ್ರಮವಾಗಿ ಸಾಲದ ಹೆಸರಿನಲ್ಲಿ ವಜಾ ಮಾಡಿಕೊಂಡು ಅವರುಗಳನ್ನುತಮ್ಮ ಜೀವಿತಾವಧಿಯವರೆಗೂ ತಮ್ಮಗಳ ಮನೆಗಳಲ್ಲಿ ಜೀತದಾಳಾಗಿ ಮಾಡಿಕೊಂಡಿದ್ದರು.ಈ ಊಳಗಮಾನ್ಯರ ಬಳಿ ದಲಿತರ ಜೀವನ ಹೇಗಿತ್ತೆಂದರೆ, ಯಜಮಾನರ ಮನೆಯಲ್ಲಿ ಮಾತ್ರವಲ್ಲದೆ ತಮ್ಮ ಕಲಾವಿದತನದ ಹಿನ್ನೆಲೆಯಲ್ಲಿ ಯಾವುದಾದರೂ ನಾಟಕಗಳಲ್ಲಿ ರಾಜನ ಪಾತ್ರ ಮಾಡಿದ್ದು, ಆ ನಾಟಕಗಳಲ್ಲಿ ತಮ್ಮ ಸಾಹುಕಾರ ಮಂತ್ರಿ, ಸೈನಿಕನ ಪಾತ್ರ ಮಾಡಿದ್ದರೆ ಸಿಂಹಾಸನದ ಮೇಲೆ ಕೂರುವ ಬದಲು ಅವರೆದುರಿಗೆ ನೆಲದ ಮೇಲೆ ಕೂರುವ ಸಂದಿಗ್ಧ ಸನ್ನಿವೇಶವನ್ನು ಎದುರಿಸುತ್ತಿದ್ದರು.[7]

ಜಮೀನ್ದಾರರುಗಳು ಇಲ್ಲಿನ ದಲಿತ ಹೆಂಗಸರನ್ನು 'ಏನಮಿ', 'ಬಾಮ್ಮಿ', 'ಹೋಗೆ', 'ಬಾರೆ' ಇನ್ನಿತರ ಅವಾಚ್ಯ ಪದಗಳಲ್ಲಿ ಸಂಭೋದಿಸಿ ಕರೆಯುತ್ತಿದ್ದರು[8]. ಇಲ್ಲಿ ಅಸ್ಪೃಶ್ಯಾಚರಣೆ ಎಷ್ಟು ಕ್ಷುಲ್ಲಕವಾಗಿತ್ತೆಂಬುದನ್ನು ಒಂದು ಉದಾಹರಣೆ ಸಹಿತ ವಿವರಿಸಬಹುದು. ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಮಾರಳ್ಳಿ ಎಂಬಲ್ಲಿ ಒಂದು ದೇವಾಲಯವಿತ್ತು. ಅಲ್ಲಿ ಪ್ರತಿವರ್ಷ ಗೌರಿಹಬ್ಬದ ಹಿಂದಿನ ದಿನ ಜಾತ್ರೆ ನಡೆಯುತ್ತಿತ್ತು. ಈ ಜಾತ್ರೆಯ ವಿಶೇಷವೆಂದರೆ ಮಕ್ಕಳಾಗದ ಮಹಿಳೆಯರನ್ನು ಅಂಗಾತ ಮಲಗಿಸಿ ಆ ದೇವಸ್ಥಾನದ ಬಸವನಿಂದ ದಾಟಿಸಿದರೆ ಆಕೆಗೆ ಮಕ್ಕಳಾಗುತ್ತವೆಂಬ ಮೌಢ್ಯ ಜನರಲ್ಲಿತ್ತು. ಪೂಜಾರಿ ಬಸವನನ್ನು ದಾಟಿಸುವ ಸಂದರ್ಭದಲ್ಲಿ ಹೆಸರು, ಜಾತಿ, ಮದುವೆಯಾದ ವರ್ಷದ ಬಗ್ಗೆ ಕೇಳುತ್ತಿದ್ದನಂತೆ. ಒಂದು ಸಾರಿ ಸರ್ಕಾರಿ ನೌಕರಿಯಲ್ಲಿದ್ದ ದಲಿತರೊಬ್ಬರಿಗೆ ಮೂರು ವರ್ಷಗಳಾದರೂ ಮಕ್ಕಳಾಗದ ಕಾರಣ ಆ ಜಾತ್ರೆಯ ಬಗ್ಗೆ ತಿಳಿದು ತನ್ನ ಪತ್ನಿಯನ್ನು ಅಲ್ಲಿಗೆ ಕರೆದುಕೊಂಡು ಹೋದರು. ಆ ವೇಳೆಯಲ್ಲಿ ಪೂಜಾರಿ ಆಕೆಯ ಜಾತಿಯನ್ನು ತಿಳಿದು ಆ ಸರದಿಯಿಂದ ಮೇಲೇಳಿಸಿ ದಲಿತನಿಗೆ ತೇಜೋಭಂಗ ಮಾಡಿದ್ದನು.[9]ಹೀಗೆ ಇಂತಹ ಇನ್ನು ಮುಂತಾದ ಅಂಧಶ್ರದ್ಧೆಗಳ ಮೂಲಕ ಸವರ್ಣೀಯರು ದಲಿತರ ಜೀವನವನ್ನು ಅಧೋಗತಿಗಿಳಿಸಿ ತಮ್ಮ ಸ್ಥಾನಮಾನಗಳನ್ನು ಕಾಯ್ದುಕೊಳ್ಳುತ್ತಿದ್ದರು. ಇವರ ಇಂತಹ ನೀತಿಗೆಟ್ಟ ಆಚರಣೆಗಳನ್ನುಖಂಡಿಸಿ ಅವುಗಳನ್ನು ಉಚ್ಚಾಟನೆ ಮಾಡಲು ದಲಿತ ಪ್ರಜ್ಞಾವಂತರು ಸ್ವಾತಂತ್ರ್ಯಪೂರ್ವದಲ್ಲೇ ಪ್ರಯತ್ನಿಸುತ್ತಿದ್ದರು.

- **ದಲಿತರನ್ನು ಶೋಷಣೆಗಳಿಂದ ಮುಕ್ತರನ್ನಾಗಿಸಲು ನಡೆದ ಪ್ರಾರಂಭಿಕ ಪ್ರಯತ್ನಗಳು:**

ದಲಿತರ ಮೇಲೆ ಹೆಚ್ಚಾಗಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ವಲಯಗಳಲ್ಲಿಯೇ ನಿರ್ಬಂಧಿತ ಶೋಷಣೆಗಳು ಜಿಲ್ಲೆಯಲ್ಲಿ ಸ್ವಾತಂತ್ರ್ಯಪೂರ್ವದಿಂದಲೂ ಘಟಿಸುತ್ತಲೇ ಬಂದಿವೆ. ಪ್ರಮುಖವಾಗಿ ಕುಡಿಯುವ ನೀರಿಗಾಗಿ ಕೆರೆ, ಬಾವಿಗಳು ಮತ್ತು ದೇವಸ್ಥಾನ ಪ್ರವೇಶ, ಹರಿಜನರಿಗಾಗಿ ಶಾಲೆ, ಕಾಲೇಜುಗಳು, ವಿದ್ಯಾರ್ಥಿ ನಿಲಯಗಳ ಸ್ಥಾಪನೆಗಳಿಗಾಗಿ ಆಂದೋಲನಗಳು ನಡೆದಿವೆ.

ಮೊದಲನೆಯದಾಗಿ ಏಪ್ರಿಲ್, 1932ರಲ್ಲಿ ಮಳವಳ್ಳಿ ತಾಲ್ಲೂಕಿನಲ್ಲಿರುವ 'ಕುನ್ನೀರು ಕಟ್ಟೆ"ಯಲ್ಲಿ ಕುಡಿಯುವ ನೀರಿಗಾಗಿ ನಡೆದ ಹೋರಾಟ.ಈ ಕಟ್ಟೆಯಲ್ಲಿನ ನೀರು ಆರೋಗ್ಯಕರ ಮಿನರಲ್ಸ್ ಅಂಶಗಳಿಂದ ಕೂಡಿದ್ದರಿಂದ ಕುಡಿಯುವ ಶುದ್ಧ ನೀರಿಗೆ ಪ್ರಸಿದ್ಧಿ ಪಡೆದಿತ್ತು. ಇದರಿಂದಾಗಿಯೇ ಟಿಪ್ಪುಸುಲ್ತಾನ್‌ಈ ನೀರಿನ ಮಹತ್ವವನ್ನು ಅರಿತು ಕುಡಿಯಲು ತನ್ನ ಬಳಿಗೂ ತರಿಸಿಕೊಳ್ಳುತ್ತಿದ್ದನು.ಈ ಹಿನ್ನೆಲೆಯಲ್ಲಿ ಈ ಕಟ್ಟೆಯಲ್ಲಿ ದನ, ಕರು, ಎಮ್ಮೆ, ಬಟ್ಟೆಗಳನ್ನು ತೊಳೆಯಬಾರದೆಂದು ವಿಧಿಯನ್ನು ರೂಪಿಸಲಾಗಿತ್ತು. ಇವುಗಳಂತೆಯೇ ಹರಿಜನರಿಗೂ ಇಲ್ಲಿ ನೀರು ತೆಗೆದುಕೊಳ್ಳದಂತೆ ಕಟ್ಟಾಜ್ಞೆ ವಿಧಿಸಿ ಊರಾಚೆಗಟ್ಟಿದ್ದರು. ಇದನ್ನು ಮನಗಂಡು ಏನಾದರು ಮಾಡಿ ದಲಿತ ವರ್ಗಗಳಿಗೆ ಅಲ್ಲಿ ನೀರು ಬಳಸುವ ಅವಕಾಶವನ್ನು ಮಾಡಿಕೊಡುವ ಸಲುವಾಗಿ ಗಾಂಧೀಜಿಯವರ ಸಬರಮತಿ ಆಶ್ರಮದಲ್ಲಿ 10 ತಿಂಗಳು ಸಲ್ಲಿಸಿದ್ದ ಮಳವಳ್ಳಿಯ ಎಂ.ಮಾದಯ್ಯ ಎಂಬುವರು ದಲಿತರಿಗಾಗಿ ಕಟ್ಟೆಯಒಂದು ಕಡೆ ಮೆಟ್ಟಿಲುಗಳನ್ನು ವ್ಯವಸ್ಥೆ ಮಾಡಿಸಿದ್ದರು. ಇದರಿಂದ ಕುಪಿತಗೊಂಡ ಸವರ್ಣೀಯರು ಹರಿಜನರು ಕಟ್ಟೆಯಿಂದ ನೀರು ತೆಗೆದುಕೊಳ್ಳಲು ಇಳಿಯದಂತೆ ಮಲ, ಪಾಪಸ್‌ಕಳ್ಳಿ ಮುಳ್ಳುಗಳನ್ನು ಆ ಮೆಟ್ಟಿಲುಗಳ ತುಂಬ ಸುರಿದಿದ್ದರು. ಮಾತ್ರವಲ್ಲದೆನೀರು ತೆಗೆದುಕೊಳ್ಳಲು ಮುಂದಾದ ಹರಿಜನರಕೇರಿಗೆ ನುಗ್ಗಿ ಹರಿತ ಆಯುಧಗಳಿಂದ ಮನಬಂದಂತೆ ಅವರನ್ನು ಥಳಿಸಿ ಸಾಮಾಜಿಕ ಬಹಿಷ್ಕಾರ ಹಾಕಿದರು. ಇದರಿಂದ ಧೃತಿಗೆಟ್ಟ ಎಂ.ಮಾದಯ್ಯ, ಡಿ. ರುದ್ರಯ್ಯ (ನಿವೃತ ವೆಟರ್ನರಿ ಡೈರೆಕ್ಟರ್) ಮತ್ತು ಎಂ.ಶಂಕರಯ್ಯ ಎಂಬುವವರು ದಲಿತರ ರಕ್ಷಣೆಗಾಗಿ 'ಆದಿಕರ್ನಾಟಕ ಅಭಿವೃದ್ಧಿ ಸಂಘ'ವನ್ನು ಸ್ಥಾಪಿಸಿ ಈ ಅನ್ಯಾಯವನ್ನು ಪ್ರಶ್ನಿಸಲು ಮುಂದಾದರು.

ನಂತರ ಇವರು ಮಳವಳ್ಳಿಯಲ್ಲಿ ಹರಿಜನರು ಅನುಭವಿಸುತ್ತಿರುವ ನೋವನ್ನು ಅಂದಿನ ಮೈಸೂರು ಸಂಸ್ಥಾನದಲ್ಲಿ ಹರಿಜನೋದ್ಧಾರಕ್ಕಾಗಿ ಶ್ರಮಿಸುತ್ತಿದ್ದ ಆರ್. ಗೋಪಾಲಸ್ವಾಮಿ ಅಯ್ಯರ್‌ರವರನ್ನು ಭೇಟಿಮಾಡಿ ತಿಳಿಸಿದರು. ಅಲ್ಲದೆ ಮುರುಗೇಶಪಿಳ್ಳೆ, ಪಾಮಡಿ ಸುಬ್ಬರಾಯಶೆಟ್ಟಿ, ಹರಿಜನ ಸೇವಕ ಸಂಘದ ಟಿ.ರಾಮಚಂದ್ರರವರ ಗಮನಕ್ಕೂ ತಂದರು. ನಂತರ ಇವೆರೆಲ್ಲರೂ ಕೂಡಿಕೊಂಡು ಮೈಸೂರು ಸಂಸ್ಥಾನದ ದಿವಾನರಾಗಿದ್ದ ಸರ್. ಮಿರ್ಜಾ ಇಸ್ಮಾಯಿಲ್ (1926–1941)ರನ್ನು ಸಂಧಿಸಿ ಮಳವಳ್ಳಿಯಲ್ಲಿ ಹರಿಜನರಿಗೆ ಅಸ್ಪೃಶ್ಯತಾಚರಣೆಯಿಂದ ರಕ್ಷಣೆ ಮತ್ತು ಕುನ್ನೀರು ಕಟ್ಟೆಯಲ್ಲಿ ನೀರು ತೆಗೆದುಕೊಳ್ಳಲು ಪೋಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಿಸಿದರು. ಇದರಿಂದಾಗಿ ಟಿ.ಮಾದಯ್ಯ (ಇನ್ಸುರೆನ್ಸ್ ಡಿಪಾರ್ಟ್‌ಮೆಂಟ್)ರವರ ತಾಯಿ ರಿಸರ್ವ್‌ಪೋಲೀಸ್ ರಕ್ಷಣೆಯಲ್ಲಿ ಆ ಕಟ್ಟೆಯಲ್ಲಿ ಒಂದು ಕೊಡ ನೀರು ತಂದು ಹರಿಜನರಿಗೆ ನೀರು ಬಳಸಲುಅವಕಾಶ ಸಿಕ್ಕಿದ್ದನ್ನು ಸಾರಿದರು.ಇದರಿಂದ ಕಂಗಾಲಾದ ಜಾತೀವಾದಿಗಳು ದಲಿತರ ಮೇಲೆ ಹಲ್ಲೆ, ಸುಲಿಗೆ ಮಾಡಲು ಮುಂದಾದರು. ಆದರೆ ಪೋಲೀಸರ ಸರ್ಪಗಾವಲಿನಿಂದ ಪರಿಸ್ಥಿತಿ ತಿಳಿಯಾಯಿತು.

ಆದರೆ ಅದೇ ವರ್ಷ ಆಂದರೆ ಮೇ 1932ರಂದು ಸಿ.ಡಿ. ಮಾದಯ್ಯರವರ ಮಗಳು ದೊಡ್ಡಲಿಂಗಮ್ಮ ಎಂಬುವವರುಕಟ್ಟೆಗೆ ನೀರು ತರಲು ಹೋದಾಗ ಈಗಾಗಲೇ ನಡೆದ ಘಟನೆಯಿಂದ ಹರಿಜನ ಮೇಲೆ ದ್ವೇಷವನ್ನು ಹೊಂದಿದ್ದ ಈ ಶಕ್ತಿಗಳು ಆಕೆಯ ಸೀರೆ, ರವಿಕೆ, ಹರಿದು ಥಳಿಸಿ ಅವಮಾನಗೊಳಿಸಿದರು. ಇದರ ವಿರುದ್ಧ ಸಿಡಿದೆದ್ದ ಎಂ ಮಾದಯ್ಯ, ಚಿಕ್ಕಲಿಂಗಯ್ಯ (ಎಂ.ಎಲ್.ಎ.), ಎಂ ಶಂಕರಯ್ಯ, ಡಿ. ರುದ್ರಯ್ಯ ತಮ್ಮ ಸಂಘದ ಮೂಲಕ ಪ್ರತಿಭಟಿಸಿ 27 ಜನ ಆರೋಪಿಗಳಿಗೆ 14 ವರ್ಷ ಶಿಕ್ಷೆಯಾಗುವಂತೆ ಮಾಡಿದರು. ಅಲ್ಲದೆ ಕುನ್ನೀರುಕಟ್ಟೆಯಲ್ಲಿ ಹರಿಜನರು ನೀರು ತೆಗೆದುಕೊಳ್ಳುವ ಹಕ್ಕನ್ನು ಸರ್ಕಾರದಿಂದ ಪಡೆದುಕೊಂಡರು.[10]

ಕುನ್ನೀರುಕಟ್ಟೆಯಲ್ಲಿ ಹರಿಜನರು ನೀರು ತೆಗೆಯಲು ಅನುಮತಿಯನ್ನು ಸರ್ಕಾರ ಕೊಟ್ಟ ಸುದ್ಧಿ ಮುಟ್ಟುತ್ತಿದ್ದಂತೆಯೇ ಮದ್ದೂರು ತಾಲ್ಲೂಕಿನ ಕೊಪ್ಪ ಹೋಬಳಿ ಕೊತ್ನಳ್ಳಿಕೆರೆಯಲ್ಲಿ ನೀರು ಮುಟ್ಟಲು ಸುಮಾರು 400 ಮಂದಿ ಹೆಂಗಸರು ಮುಂದಾದರು. ಈ ವಿಷಯ ತಿಳಿದ ಭೂ ಮಾಲೀಕವರ್ಗಗಳು ಹರಿಜನರ ಮೇಲೆ ಹಠಾತ್ ದಾಳಿ ನಡೆಸಿ ಮನಬಂದಂತೆ ಥಳಿಸಿದರು. ಅಲ್ಲದೆ ಹರಿಜನರ ಬೀದಿಗೆ ನುಗ್ಗಲು ಮುಂದಾಗಿ ಅವರಿಂದಲೂ ಹಲ್ಲೆಗೊಳಗಾದರು. ನಂತರ ಹರಿಜನರು ಎಂ.ಮಾದಯ್ಯ, ಟಿ.ರಾಮಸ್ವಾಮಿಯವರ ಸಹಯೋಗದಲ್ಲಿ ಸಂಘಟನೆಗೊಂಡು ಮೇಲ್ಜಾತಿಗಳ ದಬ್ಬಾಳಿಕೆಯನ್ನು ರೆವೆರೆಂಡ್ ಸಾಟೆಯೆವರಿಗೆ ತಿಳಿಸಿ ನೇರವಾಗಿ ಆರ್.ಗೋಪಾಲಸ್ವಾಮಿ ಅಯ್ಯರ್, ಮುರುಗೇಶಪಿಳ್ಳೆ,ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಕಾರ್ಯದರ್ಶಿಗಳಾಗಿದ್ದ ಎಂ. ವಿ. ಠಕ್ಕರ್ ಬಾಬರವರೊಡನೆ ಕೊತ್ನಳ್ಳಿಗೆ ಬಂದರು. ಡಿ.ಸಿ. ಯವರ ಸಹಕಾರದಿಂದ ಅಲ್ಲಿ ಊರಿನ ಪಟೇಲರೊಡನೆ ಪಂಚಾಯಿತಿ ನಡೆಸಿ ಹರಿಜನರು ಕೆರೆಯಲ್ಲಿ ನೀರು ತೆಗೆದುಕೊಳ್ಳಲು ಅನುಮತಿ ಸಿಗುವಂತೆ ಮಾಡಿದರು.[11]

ಇದೇ ರೀತಿಯಲ್ಲಿ ಸಾತನೂರು ಬಳಿಯಿರುವ ಕೊಮ್ಮೇರಹಳ್ಳಿಯಲ್ಲಿ ಕೆರೆ ನೀರು ಬಳಸುವುದಕ್ಕೆಸಂಬಂಧಿಸಿದಂತೆ ಹರಿಜನರಿಗೂ ಹಾಗೂ ಒಕ್ಕಲಿಗರಿಗೂ ಮಾರಾಮಾರಿ ನಡೆದಿತ್ತು. ಈ ಕಿತ್ತಾಟದಲ್ಲಿ ಎರಡೂ ಕಡೆಗಳಲ್ಲೂ ಐದು ಜನರ ಸಾವು ಸಾವಾಗಿತ್ತು. ಇದನ್ನು ತಿಳಿಗೊಳಿಸುವ ಸಲುವಾಗಿ ಆರ್. ಗೋಪಾಲಸ್ವಾಮಿ ಅಯ್ಯರ್, ಕೆ.ಹೆಚ್. ರಾಮಯ್ಯ, ಕೆಂಗಲ್ ಹನುಮಂತಯ್ಯ, ತಗಡೂರು ರಾಮಚಂದ್ರರಾಯರು ಕ್ರಿಯಾಶೀಲರಾದರು ಕೊನೆಗೆ ಇಲ್ಲೂ ಕೂಡ ಹರಿಜನರಿಗೆ ನೀರು ಬಳಸಲು ಅನುಮತಿ ದೊರೆಯಿತು.[12]

ಹೀಗೆ ಸ್ವಾತಂತ್ರ್ಯಪೂರ್ವದಮಂಡ್ಯ ಜಿಲ್ಲೆಯಲ್ಲಿ ದಲಿತರ ಹಿತರಕ್ಷಣೆಗಾಗಿ ಪ್ರಯತ್ನಗಳು ನಡೆದವು. ಅಲ್ಲದೆ ಇದೇರೀತಿಯಲ್ಲಿ ಸ್ವಾತಂತ್ರ್ಯ ನಂತರವೂಅಂದರೆ 1970ರ ದಶಕದಲ್ಲಿ ಮಂಡ್ಯ ಜಿಲ್ಲೆಯ ಕಾಡುಕೊತ್ನಳ್ಳಿಗ್ರಾಮದವರಾದ ಬಿ. ಹಟ್ಟಯ್ಯ ಎಂಬುವವರು ದಲಿತರ ಶ್ರೇಯೋಭಿವೃದ್ಧಿಗಾಗಿ ಹಲವು ರೀತಿಯ ಪ್ರಗತಿಪರ ಕೆಲಸಗಳನ್ನು ಸಹಪಾಠಿಗಳ ನೆರವಿನಿಂದ ಪೂರೈಸಿದರು. ಇವರು ಹರಿಜನರ ಶಿಕ್ಷಣಕ್ಕಾಗಿವಿವಿಧ

ರೀತಿಯ ಬಾಲವಾಡಿಗಳು, ಶಾಲೆಗಳು, ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ನಿಲಯಗಳನ್ನು ಸ್ಥಾಪಿಸಿದರು. ಆರ್. ಗೋಪಾಲಸ್ವಾಮಿ ಅಯ್ಯರ್‌ರವರ ಹೆಸರಿನಲ್ಲಿ ಪಂಚಮಶಾಲೆ, ಹಾಸ್ಟೆಲ್‌ಗಳನ್ನು ತೆರೆದು ಅಂದಿನ ದಲಿತ ವಿದ್ಯಾರ್ಥಿಗಳು ಸುಶಿಕ್ಷಿತರಾಗಿ ಶೋಷಕರ ಜಾತೀಯತೆ, ಅನ್ಯಾಯ, ಅಸಮಾನತೆಗಳ ವಿರುದ್ಧ ಕ್ರಾಂತಿಯ ಕಹಳೆ ಮೊಳಗಿಸಲು ವೇದಿಕೆಯನ್ನು ಕಲ್ಪಿಸಿಕೊಟ್ಟರು.

ಇದರಿಂದಾಗಿಯೇ ಮಂಡ್ಯದ ವಿದ್ಯಾನಗರ ಬಡಾವಣೆಯಲ್ಲಿದ್ದ ಬಿ. ಹಟ್ಟಯ್ಯರವರು ಸ್ಥಾಪಿತ ವಿದ್ಯಾರ್ಥಿನಿಲಯಕ್ಕೆ ಬಡ ಹರಿಜನ ವಿದ್ಯಾರ್ಥಿಗಳು ದಾಖಲಾಗಿ ಉತ್ತಮ ವಿದ್ಯಾಭ್ಯಾಸವನ್ನು ಮಾಡಿ ಅಂದು ಅತ್ಯುನ್ನತ ಹುದ್ದೆಗಳನ್ನು ಅಲಂಕರಿಸಿ ಇಂದು ನಿವೃತ್ತರಾಗಿದ್ದಾರೆ. ಇವರುಗಳು ಅಂದು ತಮ್ಮ ಜೀವನವನ್ನು ರೂಪಿಸಿಕೊಳ್ಳಲು ಕಾರಣರಾದ ಬಿ.ಹಟ್ಟಯ್ಯರವರ ಚಿರಸ್ಮರಣೀಯ ಸೇವೆಯನ್ನು ಸ್ಮರಿಸಿಕೊಳ್ಳುತ್ತಿದ್ದಾರೆ.ಉದಾಹರಣೆಗೆ: ರುದ್ರಸ್ವಾಮಿ (ನಿವೃತ್ತ ಪ್ರಾದೇಶಿಕ ಸಾರಿಗೆ ಸಂಸ್ಥೆ, ಮಂಡ್ಯ), ಕೆ.ಎನ್. ಶಿವಲಿಂಗಯ್ಯ (ಗಜೇಂದ್ರ, ನಿವೃತ್ತ ಮುಖ್ಯ ವ್ಯವಸ್ಥಾಪಕರು, ಎಸ್.ಬಿ.ಐ. ಲೀಡ್ ಬ್ಯಾಂಕ್, ಮೈಸೂರು) ಮುಂತಾದವರು ಪ್ರಮುಖರು.ಮಾತ್ರವಲ್ಲದೆ ಹಟ್ಟಯ್ಯರವರ ಹೋರಾಟದ ಗುಣವನ್ನು ಅಂದಿನ ಇವರ ಆಶ್ರಿತ ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನದಿಂದಲೇ ಅಳವಡಿಸಿಕೊಂಡು 70ರ ದಶಕದ ದಲಿತ ಚಳವಳಿಯಲ್ಲಿ ಮುಂಚೂಣಿಯ ನಾಯಕರಾಗಿಯೂ ಕೂಡ ಗುರುತಿಸಿಕೊಂಡಿದ್ದಾರೆ.[13]

ಇದರ ಜೊತೆಗೆ ಕಾಡುಕೊತ್ನಳ್ಳಿಯಲ್ಲಿ ಜಾತಿವಾದಿ ಒಕ್ಕಲಿಗರು ತಮ್ಮ ಬೀದಿಗೆ ಹರಿಜನರ ಪ್ರವೇಶವನ್ನು ನಿಷೇಧಿಸಿದ್ದರು. ಇದನ್ನು ತಿಳಿದ ಬಿ. ಹಟ್ಟಯ್ಯರವರು ತಮ್ಮದೇ ಗ್ರಾಮದ ತಮ್ಮ ಆತ್ಮೀಯ ಜೊತೆಗಾರರಾಗಿದ್ದ ಮೋರಿ ಈರಯ್ಯನ ಸಿದ್ದಪ್ಪ, ಬಿ. ಕರಿಯಯ್ಯರವರ ಸಹಕಾರದೊಂದಿಗೆಈ ದುರಾಭ್ಯಾಸದ ವಿರುದ್ಧ ಸೆಟೆದು ನಿಂತಿದ್ದರು. ಇವರುಗಳ ಹೋರಾಟದ ಫಲದಿಂದಾಗಿ ಅಂದಿನ ಒಕ್ಕಲಿಗ ಸಮುದಾಯಗಳು ಪ್ರವೇಶ ನಿಷೇಧವನ್ನು ತೆರವುಗೊಳಿಸಿದರು. ಇದಿಷ್ಟು ಮಾತ್ರವಲ್ಲದೆ ಇವರ ದಿಟ್ಟತನದ ಪ್ರಶ್ನಿಸುವಿಕೆಯಿಂದ ಎಚ್ಚೆತ್ತ ಒಕ್ಕಲಿಗರು ಹರಿಜನರಿಗೆ ನಿಷೇಧವೇರಿದ್ದ ದೇವಸ್ಥಾನ, ಕೆರೆ, ಬಾವಿಗಳಗೆನೀರಿಗಾಗಿ ಪ್ರವೇಶವನ್ನು ಒದಗಿಸಿದರು. ಉದಾಹರಣೆ: ಮದ್ದೂರು ನರಸಿಂಹಸ್ವಾಮಿ ದೇವಾಲಯ, ವೀರಭದ್ರಸ್ವಾಮಿ ದೇವಾಲಯ, ಸೂನಗಹಳ್ಳಿಯ ವರದರಾಜಸ್ವಾಮಿ ದೇವಾಲಯಗಳಗೆಪ್ರವೇಶ.

ಬಿ. ಹಟ್ಟಯ್ಯರವರು ನಿರುದ್ಯೋಗಿ ದಲಿತ ಯುವಕ ಯುವತಿಯರಿಗೆ ಉದ್ಯೋಗ ಕೌಶಲಗಳನ್ನು ತರಬೇತಿಗಳನ್ನು ಕೊಡಿಸಿ,ಸ್ವ–ಸಾಮರ್ಥ್ಯದ ಸ್ವಾಭಿಮಾನಯುಕ್ತ ಜೀವನ ನಿರ್ವಹಣೆಯಲ್ಲಿ ತೊಡಗುವಂತೆ ಮಾಡಿದರು. ಅಲ್ಲದೆ ಹರಿಜನರನ್ನು ಮದ್ಯಪಾನದ ಚಟದಿಂದ ದೂರವಿರಿಸಲು ಪಾನನಿರೋಧ ಚಳವಳಿ ಮತ್ತು ಇದರ ವಿರುದ್ಧ ದಲಿತರಲ್ಲಿ ಜಾಗೃತಿ ಮೂಡಿಸಲು ಹಲವಾರು ಸಮ್ಮೇಳನಗಳನ್ನು ಮಾಡಿದರು. ಜೊತೆಗೆ ಇದರ ಹಿನ್ನಲೆಯಲ್ಲಿ ಮಧ್ಯಪಾನದ ಮೂಲೋಚ್ಛಾಟನೆಗಾಗಿ ರಾಷ್ಟ್ರಮಟ್ಟದ ಸಮ್ಮೇಳನಗಳಲ್ಲೂ

ಭಾಗವಹಿಸಿದರು.[14]ಇವರ ಹೋರಾಟದ ಪ್ರಭಾವದಿಂದಾಗಿ ಜಿಲ್ಲೆಯಾದ್ಯಂತಇವರ ಸಮಕಾಲೀನ ದಲಿತಪರ ಹೋರಾಟಗಾರರು ಸದೃಶರಾದರು. ಅವರುಗಳಲ್ಲಿಎಂ.ಎಸ್. ಸಿದ್ಧಯ್ಯ, ಎಸ್. ಹೊನ್ನಯ್ಯ, ಬಾಲಸುಂದರಂ, ಚಿಕ್ಕಲಿಂಗಮ್ಮ, ಚಿಕ್ಕಹೊಂಬಯ್ಯ, ಜಿ. ದೇವಯ್ಯ, ಕೌಲ್ಡೆ ಚೌಡಯ್ಯ, ಮದ್ದೂರಿನ ಗಂಜಯ್ಯ, ಕುದುರೆಗುಂಡಿ ಬೋರಯ್ಯ, ನಾಗಮಂಗಲದ ಮೇಷ್ಟ್ರು ಗಂಗಯ್ಯ, ಶ್ರೀರಂಗಪಟ್ಟಣದ ಕೆ. ಶೆಟ್ಟಿಹಳ್ಳಿಯಮರಿಯಪ್ಪ, ಗಂಜಾಂ ವೆಂಕಟಯ್ಯ, ನಗುವಿನಹಳ್ಳಿ, ಮೂಗಯ್ಯ, ಕೆ.ಆರ್. ಪೇಟೆಯ ಗಂಟಯ್ಯ, ಕರ್ಜಯ್ಯ, ಕೆಂಗಯ್ಯ, ಪಾಂಡವಪುರದ ಮರಿಮಾದಯ್ಯ, ಮುತ್ತಯ್ಯ, ದಾಸಯ್ಯ, ಬೆಟ್ಟಯ್ಯ, ದೊಡ್ಡಯ್ಯ ಮುಂತಾದವರು ಹರಿಜನರ ಮೇಲಿನ ಅಸ್ಪೃಶ್ಯತಾಚರಣೆ ಆಧರಿತ ದೌರ್ಜನ್ಯಗಳ ವಿರುದ್ಧ ಸಾಮಾಜಿಕ ನ್ಯಾಯಕ್ಕಾಗಿ ದುಡಿದಿದ್ದಾರೆ.[15]

ಹಾಗಿಯೇ ಮಂಡ್ಯದ ಮದ್ದೂರು ತಾಲ್ಲೂಕಿನ ಬೆಸಗರಹಳ್ಳಿಯಲ್ಲಿ ಹರಿಜನರಿಗೆ ಹೊಟೇಲ್ ಪ್ರವೇಶದ ನಿಷೇಧವನ್ನು ಹೇರಲಾಗಿತ್ತು. ಈ ಸನಾತನ ಸಂಪ್ರದಾಯವನ್ನು ಯಾವ ದಲಿತನಾದರೂ ಮೀರಿದರೆ ಅವರಿಗೆ ಉಗ್ರವಾದ ಶಿಕ್ಷೆಗೆ ಒಳಗಾಗುತ್ತಿದ್ದರು. ಇದು ಇಡೀ ಮನುಕುಲಕ್ಕೆ ಆದ ಅವಮಾನವೆಂದು ತೀರ್ಮಾನಿಸಿ, ಬೆಸಗರಹಳ್ಳಿಯಲ್ಲಿನ ಪ್ರಗತಿಪರ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡಿದ್ದ ದಲಿತ ಸಮುದಾಯದ ಗಿರಿಯಯ್ಯ ಮತ್ತು ವೈದ್ಯರಾಗಿದ್ದ ಗಂಗಾಧರಯ್ಯರವರು ಈ ಆಚರಣೆಯ ವಿರುದ್ಧ ಸಂಘಟನಾತ್ಮಕ ಹೋರಾಟ ಮಾಡಿದ್ದರು. ಇದೇ ಸಂದರ್ಭದಲ್ಲಿ ಗಿರಿಯಯ್ಯರವರ ಮೇಲೆ ಸವರ್ಣೀಯರುಗಳು ಹಲ್ಲೆ ಮಾಡಿದ್ದರು. ಇದರಿಂದಾಗಿ ಇವರ ಹೋರಾಟದ ತೀವ್ರತೆ ಹೆಚ್ಚಾಗಿ ಬೆಸಗರಹಳ್ಳಿಯಾದ್ಯಂತ ಬೃಹತ್ ಪ್ರತಿಭಟನೆಗಳಾದವು. ಈ ಪ್ರಕರಣ ಜಿಲ್ಲಾ ಆಡಳಿತದವರೆಗೂವ್ಯಾಪಿಸಿ ಕಾದಬಾಣಲೆಯಂತೆ ಬಿಸಿಬಿಸಿ ಸುದ್ಧಿಯಾಗಿತ್ತು. ಇದರ ಉಪಶಮನಕ್ಕಾಗಿ ತಕ್ಷಣ ಮಧ್ಯಪ್ರವೇಶ ಮಾಡಿದಜಿಲ್ಲಾಡಳಿತ ಕಾನೂನಿನ ನಿರ್ದೇಶನದಂತೆ ಹರಿಜನರಿಗೆ ಹೊಟೇಲ್ ಪ್ರವೇಶದ ನಿಷೇಧವನ್ನು ತೆರವುಗೊಳಿಸಿ ಮುಕ್ತಪ್ರವೇಶವನ್ನು ನೀಡುವಂತೆ ಆದೇಶವಿತ್ತರು. ಆದರೆ ಈ ಅಸ್ಪೃಶ್ಯತಾಚರಣೆಯಿಂದ ನೊಂದ ಗಂಗಾಧರಯ್ಯರವರು ಹಿಂದೂಧರ್ಮದಲ್ಲಿನ ಮನುಸ್ಮೃತಿಯ ಅಸಮಾನತೆಯನ್ನು ವೇದವಾಕ್ಯದ ಪಾಲನೆಯನ್ನು ತುಚ್ಛೀಕರಿಸಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರವಾದರು. ಇದು ಹಿಂದೂಧರ್ಮದಲ್ಲಿನ ಜಾತೀಯತೆಯ ತೀವ್ರತೆಗೆ ಹಿಡಿದ ಕೈಗನ್ನಡಿಯಾಯಿತು.[16]

ಇದೇ ವೇಳೆಗೆ ರಾಜ್ಯದಾದ್ಯಂತ ಸುಶಿಕ್ಷಿತರಾದ ದಲಿತ ಪ್ರಜ್ಞಾವಂತರು ವಿಚಾರವಂತರುಗಳಲ್ಲಿ ಗಾಂಧೀಜಿ, ಬಿ.ಆರ್.ಅಂಬೇಡ್ಕರ್, ರಾಮ ಮನೋಹರ ಲೋಹಿಯಾ, ಜಯಪ್ರಕಾಶ್ ನಾರಾಯಣ(ಜೆ.ಪಿ.)ರವರ ಅನ್ಯಾಯವನ್ನು ಪ್ರತಿಭಟಿಸಿ ಹಕ್ಕುಗಳನ್ನು ಪಡೆಯುವ ಜನಪರ ವಿಚಾರಧಾರೆಗಳು ಮನಮುಟ್ಟಿದವು. ಅಲ್ಲದೆ ಅಮೇರಿಕಾದಲ್ಲಿ ನಿಗ್ರೋಗಳ ಬಾಳಿನ ಆಶಾಕಿರಣವಾದ ಬ್ಲಾಕ್‌ಪ್ಯಾಂಥರ್ಸ್ ಪಾರ್ಟಿ, ಮಹಾರಾಷ್ಟ್ರದ ಭೀಮಸೇನೆ, ದಲಿತ್ ಪ್ಯಾಂಥರ್ಸ್ ಸಂಘಟನೆಗಳ ಹೋರಾಟದ ಶೈಲಿ ಇವರನ್ನು "ಕರ್ನಾಟಕ ದಲಿತ ಸಂಘರ್ಷಸಮಿತಿ" (ಕ.ದ.ಸಂ.ಸ.)ಯ ಸ್ಥಾಪನೆಗೆ ಪ್ರೇರೇಪಿಸುವಲ್ಲಿ

ಪ್ರಮುಖ ಪಾತ್ರ ವಹಿಸಿದವು.[17] ಇದರಿಂದಾಗಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯುರಾಜ್ಯದಾದ್ಯಂತ ಶೋಷಣೆ ದೌರ್ಜನ್ಯಗಳಗೊಳಗಾದ ದಲಿತರ ನಾಡಿಮಿಡಿತವಾಗಿ ಕಾರ್ಯನಿರ್ವಹಿಸಲು ಪ್ರಾರಂಭಿಸಿತು. ಹಂತ ಹಂತವಾಗಿ ತನ್ನ ಶಾಖೆಯನ್ನು ಎಲ್ಲಾ ಜಿಲ್ಲೆಗಳಗೂ ವಿಸ್ತರಿಸಿ ಕಾರ್ಯಕರ್ತರನ್ನು ತಯಾರುಮಾಡಿನಗರ ಮತ್ತು ಗ್ರಾಮೀಣ ಪ್ರದೇಶಗಳೆನ್ನದೆ ದಲಿತರ ನೋವುಗಳಗೆ ದಿವ್ಯೌಷಧವಾಗಿ ತೊಡಗಿಸಿಕೊಳ್ಳಲು ಮುಂದಾಯಿತು. ಹೀಗಾಗಿ ಇದರ ಸೇವೆಯನ್ನು ಮಂಡ್ಯ ಜಿಲ್ಲೆ ಕೂಡ ಪಡೆದುಕೊಂಡಿತು.

ಇಲ್ಲಿ ನಾರಾಯಣ್‌ರವರ ನೇತೃತ್ವದಲ್ಲಿ ಶಿವಲಿಂಗಯ್ಯ (ಗಜೇಂದ್ರ), ಗುರುಪ್ರಸಾದ್ ಕೆರಗೋಡು, ಬಸವಣ್ಣ, ರಾಜಣ್ಣ, ಎಸ್.ಎಂ. ಕೃಷ್ಣ, ಚಲುವಯ್ಯ, ವೆಂಕಟಗಿರಿಯಯ್ಯ, ರಾಜಶೇಖರ, ಶಿವಕುಮಾರ್, ಸೋಮಶೇಖರ್ ಕೆರೆಗೋಡು, ರಂಗನಾಥ್ ಕುಮಾರ್, ಚಂದ್ರಶೇಖರ್ (ಟಿಪ್ಪು), ಬಿ.ಎಸ್. ಚಂದ್ರಶೇಖರ್, ಎಂ.ಬಿ. ಶ್ರೀನಿವಾಸ್, ಸಿ.ಬಿ. ನಂಜುಂಡಪ್ಪ, ಹಾರೋಹಳ್ಳಿ ಪ್ರಕಾಶ್, ಜಯಲಿಂಗು, ಗುಂಡಾಪುರ ನಂಜುಂಡಸ್ವಾಮಿ, ಹೆಚ್.ಎಲ್. ಕೇಶವಮೂರ್ತಿ, ಬೆಸಗರಹಳ್ಳಿ ರಾಮಣ್ಣ, ಮಾಯೀಗೌಡ, ಜಿ.ಟಿ. ವೀರಪ್ಪ, ನಂಜುಂಡೇಗೌಡ, ಪುಟ್ಟಣ್ಣಯ್ಯ ಮುಂತಾದವರು ಕರ್ನಾಟಕ ದಲಿತ ಸಂಘರ್ಷ ಸಮಿತಿಮತ್ತು ಅದರ ಅಂಗಸಂಸ್ಥೆಗಳಾದ ದಲಿತ ವಿದ್ಯಾರ್ಥಿ ಒಕ್ಕೂಟ, ದಲಿತ ಕಲಾ ಮಂಡಳ, ದಲಿತ ಮಹಿಳಾ ಒಕ್ಕೂಟ, ದಲಿತ ನೌಕರರ ಒಕ್ಕೂಟಗಳ ಮೂಲಕ ದಲಿತ ಚಳವಳ ಎಂಬ ವಿಮೋಚನೆಯ ರಥವನ್ನು ಸೈನಿಕರಂತೆಎದೆಗಾರಿಕೆ ಮತ್ತು ಹೆಮ್ಮೆಯಿಂದ ಎಳೆಯಲು ಪ್ರಾರಂಭಿಸಿದರು.[18] ಇಲ್ಲಿಂದಾಚೆಗೆ ಜಿಲ್ಲೆಯಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಮೂಲಕ ದಲಿತ ಚಳವಳ ಶೋಷಿತ ದಲಿತರ ಆಪತ್ಬಾಂದವನಾಯಿತು.

**ಕೊನೆಟಿಪ್ಪಣಿಗಳು**:

1. ಎ. ಪಾರ್ಥಸಾರಥಿ, ಕ.ಅ.ಸೇ, ಭಾರತದ ಗೆಜೆಟಿಯರ್ ಕರ್ನಾಟಕ ರಾಜ್ಯ, ಮಂಡ್ಯ ಜಿಲ್ಲೆ, (ಪರಿಷ್ಕೃತ ಆವೃತ್ತಿ) 2003, ಪುಟ 03.
2. ಅದೇ, ಪುಟ 36–93.
3. Suryanath Kamath, Gazetteer of India, Karnataka State Gazetteer, Mysore District, Pp04.

4. ಎ. ಪಾರ್ಥಸಾರಥಿ, ಕ.ಅ.ಸೇ, ಭಾರತದ ಗೆಜೆಟಿಯರ್, ಕರ್ನಾಟಕ ರಾಜ್ಯ, ಮಂಡ್ಯ ಜಿಲ್ಲೆ (ಪರಿಷ್ಕೃತ ಆವೃತ್ತಿ) 2003, ಪುಟ 10–11.

5. ಅದೇ, ಪುಟ 11.

6. Scarlett Episton, Economic Development and Social change in South India, 1962, Pp. 309.

7. Ibid, Pp. 184.

8. ದಲಿತ ಕಲಾವಿದೆ ಶಿವಮ್ಮನವರ ಸಂದರ್ಶನ, ಭಾನುವಾರ, ಡಿಸೆಂಬರ್ 09, 2012.

9. ಪಂಚಮ, ಗೂಳಿ ಗುಟೂರು ಹಾಕಿತು!– ಗುರುಪ್ರಸಾದ್ ಕೆರಗೋಡು, ಸಂಪುಟ 12, ಸಂಚಿಕೆ 1–3, ಜನವರಿ 1988, ಪುಟ 07.

10. ಜಿ. ಗೋಪಾಲ್, ಆರ್. ಗೋಪಾಲಸ್ವಾಮಿ ಅಯ್ಯರ್, ಪುಟ 42–45.

11. ಅದೇ, ಪುಟ 45 – 46.

12. ಅದೇ, ಪುಟ 46–47.

13. ಕೆ.ಎನ್. ಶಿವಲಿಂಗಯ್ಯರವರ (ನಿವೃತ್ತ ಮುಖ್ಯ ವ್ಯವಸ್ಥಾಪಕರು, ಎಸ್.ಬಿ.ಐ. ಲೀಡ್ ಬ್ಯಾಂಕ್, ಮೈಸೂರು) ಸಂದರ್ಶನ.

14. ವೀರಭದ್ರಯ್ಯ, ಸಮಾಜಸೇವಕ ಬಿ. ಹಟ್ಟಯ್ಯನವರ ಜೀವನ ಪರಿಚಯ, ಪುಟ 02–04.

15. ದಲಿತ ಚಳವಳಕಾರ ನಾರಾಯಣ್‌ರವರ ಸಂದರ್ಶನ ಬುಧವಾರ, ಅಕ್ಟೋಬರ್ 20, 2012.

16. ಬಿ.ಎಂ.ಸತ್ಯರವರ (ಬೆಸಗರಹಳ್ಳಿ, ದಲಿತ ಸಂಘರ್ಷ ಸಮಿತಿಯ ಹೋರಾಟಗಾರರು) ಸಂದರ್ಶನ.

17.ದಲಿತ ಆಂದೋಲನಕಾರ ಹರಿಹರಆನಂದಸ್ವಾಮಿ ಅವರಸಂದರ್ಶನ,ಗುರುವಾರ, ಅಕ್ಟೋಬರ್ 21, 2010.

18.ದಲಿತ ಹೋರಾಟಗಾರ ಎಂ.ಬಿ. ಶ್ರೀನಿವಾಸರವರ ಸಂದರ್ಶನ, ಭಾನುವಾರ, ಜುಲೈ 01, 2012.